**(ಸಾಕ್ಷಿ ತೆಲುಗು ಭಾಷೆಯಲ್ಲಿ ಹೇಳಿದ್ದನ್ನು ಭಾಷಾಂತರಕಾರರು ಹಾಗೂ ವಕೀಲರಾದ ಶ್ರೀ ಸೂರ್ಯಕಾಂತ ವಕೀಲ ರವರು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿದ್ದನ್ನು ದಾಖಲಿಸಿಕೊಳ್ಳಲಾಗಿದೆ. )**

**ಇಂದು ದಿನಾಂಕಃ 10-11-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ JPA ವಕೀಲರಿಂದಃ-**

ಈಗ 10 ರಿಂದ 12 ವರ್ಷಗಳಿಂದ ನಾನು ಕುಂಚಾವರಂನಲ್ಲಿ ವಾಸವಿದ್ದೇನೆ. ಕುಂಚಾವರಂ ಗ್ರಾಮದಲ್ಲಿ ನನಗೆ ಸ್ವಂತ ಮನೆ ಇಲ್ಲ. ಲಕ್ಷ್ಮಸಾಗರ ಗ್ರಾಮದಲ್ಲಿ ಸಹ ನನಗೆ ಸ್ವಂತ ಮನೆ ಇಲ್ಲ ಎಂದರೆ ಸರಿ. ಮೊದಲು ಕುಂಚಾವರಂ ಅಥವಾ ಲಕ್ಷ್ಮಸಾಗರದಲ್ಲಿ ಮನೆ ಇತ್ತೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸ್ವಂತ ಮನೆಯಲ್ಲಿ ವಾಸವಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿ ಅವರು ಸ್ವಂತ ಮನೆ ನಿರ್ಮಾಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ತಮ್ಮ ತಂದೆಯ ಜಾಗದಲ್ಲಿ ಮನೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ.

ನನಗೆ ಬಂದ ಮನೆ (ಗೂಡಿಸಿ ಜಾಗ)ವನ್ನು ತುಕಾರಾಮರವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಈ ರೀತಿ ತುಕರಾಮರವರಿಗೆ ಮಾರಾಟ ಮಾಡಿ 20 ರಿಂದ 30 ವರ್ಷಗಳಾಗಿವೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಈಗ ನಾನು 30 ವರ್ಷಗಳಿಂದ ಕುಂಚಾವರಂನಲ್ಲಿ ವಾಸವಿದ್ದೇನೆ ಎಂದರೆ ಸಾಕ್ಷಿ ನಾನು ಸುಮಾರು ಗ್ರಾಮಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ವಾಸವಿದ್ದೇ ಎಂದು ನುಡಿಯುತ್ತಾರೆ.

ನಾನು ದಾವಾ ಜಮೀನನ್ನು ನೋಡದೇ 30 ವರ್ಷಗಳಾಗಿವೆ ಎಂದು ಸೂಚಿಸಿದಾಗ ಸಾಕ್ಷಿ ನೋಡಿದ್ದೇನೆ ಮತ್ತು ಅದರಲ್ಲಿ ಬರುವ ಆದಾಯವನ್ನು ನನಗೂ ಸಹ ನೀಡುತ್ತಿದ್ದರು ಎಂದು ನುಡಿಯುತ್ತಾರೆ. ಯಾರು ಎಷ್ಟು ಆದಾಯ ಕೊಡುತ್ತಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ಎಲ್ಲರೂ ಸೇರಿ ಒಟ್ಟಿಗೆ ಕೋಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಸಹೋದರರು 1973ರಿಂದ ಬೇರೆಯಾಗಿ ವಾಸವಿದ್ದೇನೆ ಎಂದು ಸೂಚಿಸಿದಾಗ ಸಾಕ್ಷಿ ಅವರೆಲ್ಲರೂ ಒಟ್ಟಿಗೆ ಇದ್ದರು ಮತ್ತು ನಾನು ಬೇರೆಯಾಗಿ ವಾಸಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರರೆಲ್ಲ ಮದುವೆಯಾದ ನಂತರ ಈಗ 25 ರಿಂದ 30 ವರ್ಷಗಳ ಹಿಂದೆಯಿಂದ ಬೇರೆ ಬೇರೆಯಾಗಿ ವಾಸಿಸುತ್ತಿದ್ದೇವೆ ಎಂದರೆ ಸಾಕ್ಷಿ ನನ್ನ ಸಹೋದರರು ಮನೆ ನಿರ್ಮಾಣ ಮಾಡಿಕೊಂಡು ಬೇರೆಯಾಗಿ ವಾಸವಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಎಂದು ಪ್ರಶ್ನಿಸಿದಾಗ ಸಾಕ್ಷಿ ಸ.ನಂ. 57ರ ಒಟ್ಟು ವಿಸ್ತೀರ್ಣ 5 ಎಕರೆ 7 ಗುಂಟೆ ಇದೆ ಮತ್ತು ಅದರಲ್ಲಿ ನನ್ನ ತಂದೆಯ ಪಾಲು 2 ಎಕರೆ 36 ಗುಂಟೆ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನ ದೊಡಪ್ಪ ಯಾವಾಗ ಪಾಲು ಮಾಡಿಕೊಂಡಿದ್ದಾರೆ ಎಂದು ದಾಖಲೆಗಳನ್ನು ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಮತ್ತು ನನ್ನ ದೊಡ್ಡಪ್ಪ ಇಂತಹ ಪಾಲು ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ 2 ಎಕರೆ 34 ಗುಂಟೆ ನನ್ನ ದೊಡ್ಡಪ್ಪನಿಗೆ 2 ಎಕರೆ 23 ಗುಂಟೆ ಜಮೀನು ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಪಹಣಿ ಪತ್ರಿಕೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಪಹಣಿ ಪತ್ರಿಕೆ ಬಿಟ್ಟು ಬೇರೆ ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ತಂದೆಗೆ ಬಂದ 2 ಎಕರೆ 23 ಗುಂಟೆ ಜಮೀನಿನಲ್ಲಿ 3 ತುಕಡಿಗಳು ಇವೆ ಎಂದರೆ ಸಾಕ್ಷಿ ಈಗ ನನಗೆ ಗೊತ್ತಿಲ್ಲದೇ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ಜಮೀನು 3 ತುಕಡಿಗಳಾಗಿ 25 ರಿಂದ 30 ವರ್ಷಗಳು ಆಗಿವೆ ಎಂದರೆ ಸರಿ. ಸದರಿ 3 ತುಕ್ಕಡಿಗಳಲ್ಲಿ ಪಶ್ಚಿಮ ದಿಕ್ಕಿನಲ್ಲಿರುವ 34 ಗುಂಟೆ ಜಮೀನು 2ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ನಾನು ವಿದ್ಯಾಭ್ಯಾಸ ಮಾಡಿಲ್ಲ ಮತ್ತು ಅವರು ಕಳ್ಳತನದಿಂದ ಏನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 3 ತುಕ್ಕಡಿಗಳಲ್ಲಿ ಪೂರ್ವ ದಿಕ್ಕಿನಲ್ಲಿರುವ ಜಮೀನಿನಲ್ಲಿ 3 ಮತ್ತು 4ನೇ ಪ್ರತಿವಾದಿಯರಿಗೆ ಸೇರಿರುತ್ತದೆ ಎಂದರೆ

ಸಾಕ್ಷಿ ಅವರಿಗೆ ಮನಸ್ಸಿಗೆ ಬಂದಂತೆ ಅವರು ಕಳ್ಳತನದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಉತ್ತರ ದಿಕ್ಕಿಗೆ 4ನೇ ಪ್ರತಿವಾದಿಗೆ ಮತ್ತು ದಕ್ಷಿಣ ದಿಕ್ಕಿನ ಜಮೀನನ್ನು 3ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಅವರಿಗೆ ಮನಸ್ಸಿಗೆ ಬಂದಂತೆ ಅವರು ಕಳ್ಳತನದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

2ನೇ ಪ್ರತಿವಾದಿ 34 ಗುಂಟೆ ಜಮೀನಿನಲ್ಲಿ ಬೆಳೆದ ಬೆಳೆಯನ್ನು 2ನೇ ಪ್ರತಿವಾದಿ ಮಾತ್ರ ಪಡೆಯುತ್ತಿದ್ದಾನೆ ಎಂದರೆ ಸಾಕ್ಷಿ ಅವರು ನನಗೆ 3 ಬಾರಿ ಹಲ್ಲೆ ಮಾಡಿದ್ದಾರೆ ಮತ್ತು ಯಾರು ಬೆಳೆ ಪಡೆಯುತ್ತಿದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ಮತ್ತು 4ನೇ ಪ್ರತಿವಾದಿಯರು ತಮಗೆ ಬಂದ ಪಾಲಿನಲ್ಲಿ ಬೆಳೆಯನ್ನು ತಾವು ಪಡೆಯುತ್ತಿದ್ದಾರೆಂದರೆ ಸಾಕ್ಷಿ ಯಾರು ಉಪಭೋಗ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಹಲ್ಲೆ ಮಾಡಿದಾಗಿನಿಂದ ನಾನು ಅಲ್ಲಿಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಈ ರೀತಿ 2 ರಿಂದ 4ನೇ ಪ್ರತಿವಾದಿಯರ ಮಧ್ಯ ಪಾಲು ಆಗಿರುವ ಬಗ್ಗೆ ಪಹಣಿ ಪತ್ರಿಕೆ ಸಹ ಆಗಿರುತ್ತದೆ ಎಂದರೆ ಸಾಕ್ಷಿ ಅವರು ಕಳ್ಳತನದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ತನಗೆ ಬಂದ ಜಮೀನಿನ ಮೇಲೆ KGB ಬ್ಯಾಂಕ ಕುಂಚಾವರಂನಲ್ಲಿ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ ಅವರು ನನಗೆ ಬೇಧರಿಸಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹೊಲದಲ್ಲಿ ಬಾವಿ ಇದೆ ಎಂದರೆ ಸರಿ. ಸದರಿ ಬಾವಿಯ ನೀರು ಹಾಗೂ ವಿದ್ಯುತ ತೆರಿಗೆಯನ್ನು 2 ರಿಂದ 4ನೇ ಪ್ರತಿವಾದಿಯರು ಭರಿಸುತ್ತಾರೆ ಎಂದರೆ ಸಾಕ್ಷಿ ಅವರು ಉಳಿಮೆ ಮಾಡುತ್ತಿದ್ದ ಕಾರಣ ಅವರೇ ಭರಿಸುತ್ತಿದ್ದಾರೆ ಮತ್ತು ಅದು ನನಗೆ ಬೇಕು ಎಂದು ನುಡಿಯುತ್ತಾರೆ. ಈ ರೀತಿ 2 ರಿಂದ 4ನೇ ಪ್ರತಿವಾದಿಯರು ಈಗ 30 ವರ್ಷಗಳಿಂದ ಸದರಿ ನೀರು ಹಾಗೂ ವಿದ್ಯುತ ತೆರಿಗೆಯನ್ನು ಭರಿಸುತ್ತಿದ್ದಾರೆ ಎಂದರೆ ಸಾಕ್ಷಿ ಅವರು ಉಪಭೋಗ ಮಾಡುತ್ತಿದ್ದ ಕಾರಣ ಅವರೇ ಭರಿಸುತ್ತಿದ್ದಾರೆ ಎಂದು ನುಡಿಯುತ್ತಾರೆ.

ದಿನಾಂಕ 14-01-1995 ರಂದು ನನಗೆ ಬಂದ 1/4th ಭಾಗವನ್ನು 2 ರಿಂದ 4ನೇ ಪ್ರತಿವಾದಿಯರಿಂದ ರೂ. 22,500/- ಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ಅವರಿಂದ ರೂ. 16,000/- ಪಡೆದು ರೂ. 20/- ಛಾಪಾ ಕಾಗದದ ಮೇಲೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಛಾಪಾ ಕಾಗದದ ಮೇಲೆ ಮಚೆಂದ್ರ, ಅಂಜಯ್ಯ , ಶ್ರೀನಿವಾಸ, ವಡ್ಲಾ ಪ್ರಭು, ಚಾಕ್ಲಿ ರಾಮಪ್ಪ ರವರ ಸಮಕ್ಷಮದಲ್ಲಿ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೃತಪಟ್ಟ ವ್ಯಕ್ತಿಗಳ ಹೆಸರುಗಳನ್ನು ಹೇಳುತ್ತಿದ್ದಿರಿ ಎಂದು ನುಡಿಯುತ್ತಾರೆ. ಮಚೇಂದ್ರರವರು ಮೃತಪಟ್ಟು ಎಷ್ಟು ವರ್ಷಗಳು ಆಗಿವೆ ಎಂದು ಪ್ರಶ್ನಿಸಿದಾಗ ಸಾಕ್ಷಿ 10 ವರ್ಷಕ್ಕೂ ಮೇಲ್ಪಟ್ಟು ಆಗಿದೆ ಎಂದು ನುಡಿಯುತ್ತಾರೆ. ದಿನಾಂಕ 28-03-1995ರಂದು ಉಳಿದ ಹಣವಾದ ರೂ. 6400/-ನ್ನು 2 ರಿಂದ 4ನೇ ಪ್ರತಿವಾದಿಯರಿಂದ ಪಡೆದು ರೂ. 10/-

ಛಾಪಾ ಕಾಗದದ ಮೇಲೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ನಾನು ಅಥವಾ ನನ್ನ ಹೆಂಡತಿ ಮಕ್ಕಳು ತಕರಾರು ಮಾಡಿದರೇ ನಾನು 2 ರಿಂದ 4ನೇ ಪ್ರತಿವಾದಿಯರಿಗೆ ರೂ. 42,500/- ಕೋಡುತ್ತೇನೆ ಎಂದು ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು 2 ರಿಂದ 4ನೇ ಪ್ರತಿವಾದಿಯರಿಂದ ಹಣ ಪಡೆದು ನರವತಂ ತಂದೆ ಶಂಕರರವರಿಂದ ಕುಂಚಾವರಂನಲ್ಲಿ ಮನೆ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ಸದರಿ ಖರೀದಿ ಮಾಡಿರುವ ಮನೆಯಲ್ಲಿ ನಾನು ವಾಸವಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸುರೇಶರವರ ಮನೆಯಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ.

ನಾನು ಲಕ್ಷ್ಮಸಾಗರ ಗ್ರಾಮದಲ್ಲಿ ವಾಸವಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ಉಪಜೀವನಕ್ಕಾಗಿ ನಾನು ಬೇರೆ ಬೇರೆ ಊರುಗಳಿಗೆ ಹೋಗಿದ್ದೇನೆ ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಯರ ಹೆಸರಿನಲ್ಲಿ ವರ್ಗಾವಣೆಯಾದ ನಂತರ 2017ರಲ್ಲಿ ನಾನು ವಕೀಲರ ಮುಖಾಂತರ 2 ರಿಂದ 4ನೇ ಪ್ರತಿವಾದಿಯರಿಗೆ ಮತ್ತು ಗ್ರಾಮ ಲೆಕ್ಕಪಾಲೀಕರಿಗೆ ನೋಟಿಸನ್ನು ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೋಡಿ ಎಂದು ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ನೋಟಿಸಗೆ 2 ರಿಂದ 4ನೇ ಪ್ರತಿವಾದಿಯರು ನನ್ನ ಪಾಲನ್ನು ಖರೀದಿ ಮಾಡಿರುವುದಾಗಿ ಉತ್ತರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಸೇರಿದ ಜಮೀನು ಅಂತಾವರಂನಲ್ಲಿಯೂ ಸಹ ಇದೆ ಎಂದರೆ ಸರಿಯಲ್ಲ. ನಾನು ಉಲ್ಲೇಖ ಮಾಡಿದಂತೆ ದಾವಾ ಜಮೀನು 2 ಎಕರೆ 23 ಗುಂಟೆ ಜಮೀನು ಇರುವುದಿಲ್ಲ ಮತ್ತು ಅದರಲ್ಲಿ ಈಗಾಗಲೇ 2 ರಿಂದ 4ನೇ ಪ್ರತಿವಾದಿಯರು ಪಾಲುಗಾರಿಕೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರು ಕಳ್ಳತನದಿಂದ ಮಾಡಿಕೊಂಡಿರುತ್ತಾರೆ ಮತ್ತು ನನಗೆ ಗೊತ್ತಾದ ನಂತರ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಯರು ಮಾಡಿದ ವರ್ಗಾವಣೆ ವಿರುದ್ದ ನಾನು ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪೋಲಿಸ ಠಾಣೆಗೆ 3 ರಿಂದ 4 ಬಾರಿ ದೂರನ್ನು ಸಲ್ಲಿಸಿದ್ದೇನೆ ಮತ್ತು ಪ್ರತಿವಾದಿಯರು ಕೋಡುತ್ತೇನೆ ಎಂದು ಮುಂದೂಡುತ್ತಾ ಬಂದಿರುತ್ತಾರೆ ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಯರಿಗೆ ಬಂದ ಜಮೀನಿನ ಮಾಲೀಕರು ಮತ್ತು ಕಬ್ಜದಾರರು ಇರುತ್ತಾರೆ ಎಂದರೆ ಸಾಕ್ಷಿ ಅವರು ನನಗೆ ಬೇಧರಿಸಿ ಕಳ್ಳತನದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 1995ರಿಂದ ಇಲ್ಲಿಯವರೆಗೆ ಪ್ರತಿವಾದಿಯರಿಂದ ಯಾವುದೇ ಜಮೀನಿನ ಆದಾಯ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ಜಮೀನಿನ ಆದಾಯ ಪಡೆದಿದ್ದೇನೆ ಎಂದು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಜಮೀನಿಗೂ ಮತ್ತು ನನಗೆ ಯಾವುದೇ ರೀತಿಯಿಂದ ಸಂಬಂಧವಿಲ್ಲ ಎಂದರೆ ಸರಿಯಲ್ಲ. 2 ರಿಂದ 4ನೇ ಪ್ರತಿವಾದಿಯರು ತಮ್ಮ ಜಮೀನಿನ

ಮಾಲೀಕರು ಮತ್ತು ಕಬ್ಜೆದಾರರು ಇದ್ದರು ಸಹ ಅವರಿಗೆ ಸತಾಯಿಸಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡಿಸಿದ ಸಾಕ್ಷಿ ನ್ಯಾಯಾಲಯದಲ್ಲಿ ಸುಳ್ಳು ಹೇಳಲ್ಲ ಎಂದು ಹೇಳಿದ ಕಾರಣ ಅವರ ಸಾಕ್ಷಿಯನ್ನು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿ ಪ್ರತಿವಾದಿಯರು ಅವರಿಗೆ ಬೇಧರಿಸಿರುತ್ತಾರೆ ಆದ್ದರಿಂದ ಆತ ಬಂದಿರುವುದಿಲ್ಲ ಮತ್ತು ಬೇರೆ ಸಾಕ್ಷಿದಾರರಿಗೂ ಸಹ ಮನೆಗೆ ಹೋಗಿ ಬೇಧರಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 4ನೇ ಪ್ರತಿವಾದಿಯರು ನನಗೆ ಹಲ್ಲೆ ಮಾಡಿದ ಕಾರಣ ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜಮೀನನ್ನು 2 ರಿಂದ 4ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ಕಾರಣ ನನ್ನ ಹೆಂಡತಿ ಮತ್ತು ಮಕ್ಕಳು ದಾವೆ ಸಲ್ಲಿಸಬೇಡ ಎಂದು ಹೇಳಿದರೂ ಸಹ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ಅವರು ನನ್ನ ಮಕ್ಕಳಿಗೆ ವಿಷ ಹಾಕಿ ಕೊಂದಿರುತ್ತಾರೆ ಮತ್ತು ನನ್ನ ಹೆಂಡತಿ ಹುಷಾರ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಕ್ಕಳಿಗೆ ವಿಷ ಹಾಕಿ ಕೊಂದಿರುತ್ತಾರೆಂದು ದೂರು ಸಲ್ಲಿಸಿರುತ್ತಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮಕ್ಕಳ ವಿರುದ್ದ ಹೋಗಿದ ಕಾರಣ ಅವರು ನೊಂದು ಹೃದಯಾಘಾತದಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. 30 ವರ್ಷಗಳ ಹಿಂದೆ 2 ರಿಂದ 4ನೇ ಪ್ರತಿವಾದಿಯರಿಗೆ ನನ್ನ ಪಾಲನ್ನು ಮಾರಾಟ ಮಾಡಿದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪರವಾಗಿ ಇಲ್ಲಿಯವರೆಗೆ ಯಾವುದೇ ಸಾಕ್ಷಿದಾರರು ಬರಲು ತಯಾರಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ 2 ರಿಂದ 4ನೇ ಪ್ರತಿವಾದಿಯರೂ ಸಾಕ್ಷಿದಾರರಿಗೆ ಹಲ್ಲೆ ಮಾಡುತ್ತಿದ್ದ ಕಾರಣ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ರಿಂದ 4ನೇ ಪ್ರತಿವಾದಿಯರು ಲಕ್ಷ್ಮಸಾಗರದಲ್ಲಿ ಒಳ್ಳೆಯ ವ್ಯಕ್ತಿಗಳು ಇರುತ್ತಾರೆ ಎಂದರೆ ಸಾಕ್ಷಿ ನನಗೆ ಅನ್ಯಾಯವಾದ ಕಾರಣ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನೇ 2 ರಿಂದ 4ನೇ ಪ್ರತಿವಾದಿಯರಿಗೆ ಅನ್ಯಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 30 ವರ್ಷಗಳಿಂದ ನಾನು ದಾವಾ ಜಮೀನಿನಲ್ಲಿ ಕಬ್ಜೆ ಇಲ್ಲದಿರುವ ಕಾರಣ ಈ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿದ್ದೇನೆ ಮತ್ತು ಉಳುಮೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಹತ್ತಿರ ಯಾವುದೇ ಒಕ್ಕಲುತನ ಇಲ್ಲ ಎಂದರೆ ಸಾಕ್ಷಿ ಮೊದಲು ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ. 2 ರಿಂದ 4ನೇ ಪ್ರತಿವಾದಿಯರ ಹತ್ತಿರ ವ್ಯವಸಾಯದ ಎತ್ತುಗಳು ಇದೆ ಎಂದರೆ ಸರಿಯಲ್ಲ. ನಾನು ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**